ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 :** **ದಿನಾಂಕ: 30–4–2015**

# ಪತ್ರಿಕಾ ಆಮಂತ್ರಣ

| | | | |
|---|---|---|---|
| 1 | ಪೀಣ್ಯ ಕೈಗಾರಿಕಾ ಪ್ರದೇಶದಿಂದ ನಾಗಸಂದ್ರದವರೆಗಿನ ನಮ್ಮ ಮೆಟ್ರೋ ಮಾರ್ಗ ರೀಚ್ –3 ಬಿ ಉದ್ಘಾಟನಾ ಸಮಾರಂಭ:<br><br>ಉದ್ಘಾಟನೆ:<br><br>ರೈಲು ಚಾಲನೆಗೆ ಹಸಿರು ನಿಶಾನೆ<br><br>ಶ್ರೀ ಎಂ. ವೆಂಕಯ್ಯ ನಾಯ್ಡು,<br>ಕೇಂದ್ರ ನಗರಾಭಿವೃದ್ಧಿ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು | 01–05–2015<br>ಶುಕ್ರವಾರ<br>ಬೆಳಿಗ್ಗೆ<br>9–45 ಗಂಟೆಗೆ | ನಾಗಸಂದ್ರ ಮೆಟ್ರೋ ನಿಲ್ದಾಣ |
| | ರೀಚ್ –3 ಬಿ<br>ಉದ್ಘಾಟನೆ ಹಾಗೂ ಸಾರ್ವಜನಿಕ ಸಮಾರಂಭ:<br><br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು,ಕರ್ನಾಟಕ ಸರ್ಕಾರ<br><br>ಉಪಸ್ಥಿತಿ:<br><br>ಶ್ರೀ ಅನಂತಕುಮಾರ್,<br>ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವರು<br><br>ಮುಖ್ಯ ಅತಿಥಿಗಳು:<br><br>ಶ್ರೀ ಆರ್. ರೋಷನ್ ಬೇಗ್,<br>ಮೂಲ ಸೌಲಭ್ಯ ಅಭಿವೃದ್ಧಿ ವಾರ್ತಾ ಹಾಗೂ ಹಜ್ ಸಚಿವರು | 01–05–2015<br>ಶುಕ್ರವಾರ<br>ಬೆಳಿಗ್ಗೆ<br>10–15 ಗಂಟೆಗೆ | ಪೀಣ್ಯ ಡಿಪೋ<br>(ವೆಲ್‌ಕ್ಯಾಸ್ಟ್ ಹತ್ತಿರ)<br>ಬೆಂಗಳೂರು |

| | | | |
|---|---|---|---|
| | *ವಿಶೇಷ ಸೂಚನೆ:*<br><br>ಮೇಲ್ಕಂಡ ಎರಡೂ ಸ್ಥಳಗಳಿಗೆ ಮಾಧ್ಯಮ ಪ್ರತಿನಿಧಿಗಳು ತೆರಳಲು ವಾಹನ ವ್ಯವಸ್ಥೆ ಮಾಡಲಾಗಿದೆ<br><br>ಸಂಪರ್ಕ: ಶ್ರೀ ವಾಸ್<br><br>**94498 74530** | **01–05–2015**<br>ಶುಕ್ರವಾರ<br>ಬೆಳಿಗ್ಗೆ<br>**8–00** ಗಂಟೆಗೆ | ವಾರ್ತಾ ಸೌಧ,<br>ಭಗವಾನ ಮಹಾವೀರ ರಸ್ತೆ,<br>ಬೆಂಗಳೂರು |
| 2 | ಬಿ.ಪಿ.ಎಲ್. ಅಂತ್ಯೋದಯ ಪಡಿತರ ಚೀಟಿದಾರರಿಗೆ ಉಚಿತ ಆಹಾರ ಧಾನ್ಯ ಹಾಗೂ ರಿಯಾಯಿತಿ ದರದಲ್ಲಿ ತಾಳೆ ಎಣ್ಣೆ ಮತ್ತು ಅಯೋಡಿನ್‌ಯುಕ್ತ ಉಪ್ಪು ವಿತರಣೆಯ ಉದ್ಘಾಟನಾ ಸಮಾರಂಭ –<br><br>ಉದ್ಘಾಟನೆ:<br><br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು,<br>ಕರ್ನಾಟಕ ಸರ್ಕಾರ<br><br>ಅಧ್ಯಕ್ಷತೆ:<br><br>ಶ್ರೀ ಆರ್. ರೋಷನ್ ಬೇಗ್,<br>ಮೂಲ ಸೌಲಭ್ಯ ಅಭಿವೃದ್ಧಿ ವಾರ್ತಾ ಹಾಗೂ ಹಜ್ ಸಚಿವರು<br>ಉಪಸ್ಥಿತಿ:<br><br>ಶ್ರೀ ದಿನೇಶ್ ಗುಂಡೂರಾವ್,<br>ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು<br><br>ಆಹಾರ ಇಲಾಖೆಯ ಸಾಧನೆಯ ಕಿರು ಹೊತ್ತಿಗೆ ಬಿಡುಗಡೆ:<br><br>ಶ್ರೀ ರಾಮಲಿಂಗಾರೆಡ್ಡಿ,<br>ಸಾರಿಗೆ ಸಚಿವರು | **01–05–2015**<br>ಶುಕ್ರವಾರ<br>ಅಪರಾಹ್ನ<br>**12–00** ಗಂಟೆಗೆ | ವಿಧಾನ ಸೌಧದ ಮುಂಬಾಗ<br>ಮುಖ್ಯಧ್ವಾರ<br>ಬೆಂಗಳೂರು |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ಸಚಿವರ ಪ್ರವಾಸ

**ಬೆಂಗಳೂರು ಏಪ್ರಿಲ್ 30 (ಕರ್ನಾಟಕ ವಾರ್ತೆ):**

**ಕನ್ನಡ ಮತ್ತು ಸಂಸ್ಕೃತಿ ಸಚಿವೆ ಶ್ರೀಮತಿ ಉಮಾಶ್ರೀ ಅವರು ಮೇ 1 ರಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೇ 2 ರಂದು ಬೀದರ್, ಕಲಬುರ್ಗಿ ಹಾಗೂ ಬಾಗಲಕೋಟೆ ಜಿಲ್ಲೆಯಲ್ಲಿ ಪ್ರವಾಸ ಮಾಡುವರು.**

**ಪಲ್ಲವಿ/ಬಾಬು/ಕೆಎಂ**

## ದೂರದರ್ಶನದಲ್ಲಿ ಕಾರ್ಮಿಕ ಕಾನೂನು ಪ್ರಸಾರ

**ಬೆಂಗಳೂರು ಏಪ್ರಿಲ್ 30 (ಕರ್ನಾಟಕ ವಾರ್ತೆ):**

**ಬೆಂಗಳೂರು ದೂರದರ್ಶನದಲ್ಲಿ ಮೇ 2 ರಂದು ಶನಿವಾರ ಬೆಳಿಗ್ಗೆ 8-00 ಗಂಟೆಗೆ ಪ್ರಸಾರವಾಗುವ ಹಲೋ ಗೆಳೆಯರೇ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಕಾರ್ಮಿಕ ಕಾನೂನುಗಳು ಮತ್ತು ಕಲ್ಯಾಣ ಯೋಜನೆ ಕುರಿತಂತೆ ಪ್ರಶ್ನೆಗಳನ್ನು ಕೇಳಿ ಮಾಹಿತಿ ಪಡೆಯಬಹುದಾಗಿದೆ. ಈ ಕಾರ್ಯಕ್ರಮದಲ್ಲಿ ಕಾರ್ಮಿಕ ಇಲಾಖೆ ಆಯುಕ್ತ ಡಾ: ಡಿ.ಎನ್. ವಿಶ್ವನಾಥ್ ಅವರು ಭಾಗವಹಿಸಿ ಸಾರ್ವಜನಿಕರ ಪ್ರಶ್ನೆಗಳಿಗೆ ಉತ್ತರಿಸುವರು. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ 080– 23542599, 080– 23542699.**
**ಪಲ್ಲವಿ/ಬಾಬು/ಕೆಎಂ**

## ಕುಮಾರವ್ಯಾಸ ಪ್ರಶಸ್ತಿ

**ಬೆಂಗಳೂರು ಏಪ್ರಿಲ್ 30 (ಕರ್ನಾಟಕ ವಾರ್ತೆ):**

2014 ನೇ ಸಾಲಿನ "ಕುಮಾರವ್ಯಾಸ ಪ್ರಶಸ್ತಿ" ಯನ್ನು ಶ್ರೀಮತಿ ಕಮಲಾ ರಾಮಕೃಷ್ಣ, ಬೆಂಗಳೂರು ಇವರಿಗೆ ನೀಡಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಪಲ್ಲವಿ/ಕೆಎಂ

**ವಾರ್ತಾ ವಿಶೇಷ:**

## ಬಿಎಂಆರ್‌ಸಿಎಲ್ ಸಹಸಂಸ್ಥೆಯ ಮಹತ್ವಾಕಾಂಕ್ಷೆ ಯೋಜನೆ ಬೆಂಗಳೂರು ಹಾತ್

ಕರ್ನಾಟಕ ವೈವಿಧ್ಯತೆಗಳ ತವರೂರು. ಬೆಂಗಳೂರು ಹಲವು ಕಾರಣಗಳಿಂದ ದೇಶ ವಿದೇಶಗಳ ಗಮನ ಸೆಳೆದ ನಗರ. ಮಾಹಿತಿ ತಂತ್ರಜ್ಞಾನದ ರಾಜಧಾನಿ ಬೆಂಗಳೂರಿನಲ್ಲಿ ಸಮೂಹ ಸಾರಿಗೆಯ ಹೊಸ ಅಧ್ಯಾಯ ಆರಂಭವಾಗಿದ್ದೇ ಮೆಟ್ರೋದಿಂದ. ಮೆಟ್ರೋ ಬೆಂಗಳೂರಿಗೆ ಪ್ರವೇಶಿಸಿದಾಗ ದಕ್ಷಿಣ ಭಾರತದ ಜನತೆಗೆ ಅದು ಹೊಸತು. ನಮ್ಮ ಮೆಟ್ರೋ ಈಗ ಬೆಂಗಳೂರನ್ನು ವಿಶ್ವದರ್ಜೆಯ ನಗರವನ್ನಾಗಿಸುವಲ್ಲಿ ಮುನ್ನಡೆದಿದೆ. ಹಲವು ಪ್ರದೇಶದ, ವಿವಿಧ ಜನಾಂಗದ, ಬಹು ಭಾಷೆಯ ನಾಗರಿಕರಿರುವ ಬೆಂಗಳೂರಿನಲ್ಲಿ ಕರ್ನಾಟಕದ ಸಂಸ್ಕೃತಿಯನ್ನು ಪರಿಚಯಿಸುವ ವಿಭಿನ್ನ ಪ್ರಯತ್ನವನ್ನು ಮೆಟ್ರೋ ಸಂಸ್ಥೆ ಆರಂಭಿಸಿದೆ. ಕರ್ನಾಟಕ ರಾಜ್ಯದ ಮತ್ತು ದೇಶದ ಹಳ್ಳಿಗಾಡಿನ ಜನರ ಜೀವನಾಧಾರವಾಗಿರುವ ಗ್ರಾಮೀಣ ಉತ್ಪಾದನೆಗಳಿಗೆ ಶಾಶ್ವತವಾಗಿ ಮಾರುಕಟ್ಟೆ ಒದಗಿಸುವ ಉದ್ದೇಶದಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಸಹಯೋಗದೊಂದಿಗೆ ಬೆಂಗಳೂರು ಮೆಟ್ರೋ ಸಂಸ್ಥೆಯು“ಬೆಂಗಳೂರು ಹಾತ್” ಎಂಬ ಮಾರುಕಟ್ಟೆಯನ್ನು ಪ್ರಾರಂಭಿಸಿದೆ.

ಬೆಂಗಳೂರು ಹಾತ್ ಎಂಬ ಹೆಸರೇ ಹೇಳುವ ಹಾಗೆ ಹೈಟೆಕ್ ನಗರದಲ್ಲಿ ಹಳ್ಳಿಯ ಸೊಬಗನ್ನು ಅನಾವರಣಗೊಳಿಸುವ ಪ್ರಯತ್ನ ಇದಾಗಿದೆ. ಪ್ರತಿ ನಿತ್ಯ ಬೆಂಗಳೂರಿನಲ್ಲಿ ದೇಶ ವಿದೇಶದ ನೂರಾರು ಜನ ಪ್ರಯಾಣಿಸುವುದರಿಂದ, ಇದನ್ನು ಕೇವಲ ವ್ಯಾಪಾರಕ್ಕೆ ಮಾತ್ರ ಮೀಸಲಾಗಿಡದೆ ಗ್ರಾಮೀಣ ಸಂಸ್ಕೃತಿಯನ್ನು ಕೂಡ ಪ್ರಜ್ವಲಿಸುವಂತೆ ಮಾಡುವ ಉದ್ದೇಶವನ್ನು ಹೊಂದಿದೆ. ವಿನಾಶದ ಅಂಚಿನಲ್ಲಿರುವ ಅನೇಕ ಜಾನಪದ ಪ್ರಾಕಾರಗಳಿಗೆ ಜೀವ ತುಂಬುವ ನಿಟ್ಟಿನಲ್ಲಿ ಕಲಾ ಪ್ರಾಕಾರಗಳಿಗೆ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಅವಶ್ಯ ವೇದಿಕೆಯನ್ನು ಒದಗಿಸುವ ವ್ಯವಸ್ಥೆ ಕೂಡ ಇಲ್ಲಿ ಮಾಡಲಾಗಿದೆ.

## ಬೆಂಗಳೂರು ಹಾತ್‌ನ ಉದ್ದೇಶಗಳು

- ಹಳ್ಳಿಗಾಡಿನ ಸಾಂಪ್ರದಾಯಿಕ ವಸ್ತುಗಳ ಮಾರಾಟಕ್ಕೆ ಶಾಶ್ವತ ಮಾರುಕಟ್ಟೆಯನ್ನು ಒದಗಿಸುವುದು.
- ಗ್ರಾಮೀಣ ಕರಕುಶಲ, ಕಲೆ, ಕಸೂತಿ, ಗ್ರಾಮೀಣ ಪರಿಸರದ ವಸ್ತುಗಳಿಗೆ ಮಾರಾಟ ಮಳಿಗೆಗಳನ್ನು ಒದಗಿಸುವ ಮೂಲಕ ಅವುಗಳ ಪುನರುತ್ಥಾನ.

- ಜನರಲ್ಲಿ ಗ್ರಾಮೀಣ ಉತ್ಪಾದನೆಗಳು ಮತ್ತು ಕಲಾಗಾರರ ಬಗ್ಗೆ ಅರಿವು ಮೂಡಿಸುವುದು.
- ಕಲಾಗಾರರು, ಗ್ರಾಮೀಣ ಉದ್ದಿಮೆದಾರರು, ಸ್ವ ಸಹಾಯ ಗುಂಪುಗಳು, ಸರ್ಕಾರೇತರ ಸಂಸ್ಥೆ ಹಾಗೂ ಸರ್ಕಾರಿ ಸಂಸ್ಥೆಗಳ ನಡುವೆ ಸಮನ್ವಯ ಸಾಧಿಸುವುದು.
- ಗ್ರಾಮೀಣ ಜನರ ಬದುಕನ್ನು ಹಸನುಗೊಳಿಸುವುದು.
- ಭೌಗೋಳಿಕವಾಗಿ ವಲಯವಾರು ಗ್ರಾಮೀಣ ಪ್ರದೇಶದ ಆರ್ಥಿಕ ಅಸಮತೋಲನವನ್ನು ಕಡಿಮೆಗೊಳಿಸುವುದು.

## ಬೆಂಗಳೂರು ಹಾತ್ ಪ್ರಾಂಗಣದ ವೈಶಿಷ್ಟ್ಯತೆ

ಬೆಂಗಳೂರು ಹಾತ್ ಎರಡು ವಿಭಾಗಗಳನ್ನು ಹೊಂದಿದ್ದು ಒಟ್ಟು 90ಕ್ಕೂ ಹೆಚ್ಚು ಕೊಠಡಿಗಳಿದ್ದು ಅದರಲ್ಲಿ ಸ್ವ ಸಹಾಯ ಗುಂಪುಗಳಿಗೆ ಮಾರಾಟ ಮಾಡಲು ಅನುಕೂಲ ಕಲ್ಪಿಸಲಾಗಿದೆ. ಸದರಿ ಕೊಠಡಿಗಳಲ್ಲಿ ದಕ್ಷಿಣ ಕರ್ನಾಟಕದ ತೊಟ್ಟಿ ಮನೆಗಳು, ಮಲೆನಾಡಿನ ಕಟ್ಟೆ ಮನೆಗಳು, ಮಣ್ಣಿನ ಮನೆಗಳು, ಉತ್ತರ ಕರ್ನಾಟಕದ ಗುಂಬಜ್ ತರದ ಕಟ್ಟಡಗಳು, ಬಯಲುಸೀಮೆಯ ಮಾದರಿಯ ಕಟ್ಟಡಗಳು ಸೇರಿವೆ. ಆಡಳಿತಾತ್ಮಕವಾಗಿ ಸುಲಭ ಆಡಳಿತಕ್ಕೆ ಉಪ ವಿಭಾಗಗಳಿದ್ದು ಕೊಠಡಿಗಳನ್ನು ಹಾಗೂ ಮಾರುಕಟ್ಟೆ ಪ್ರಾಂಗಣವನ್ನು ಗುಂಪುಗಳಾಗಿ ವಿಂಗಡಿಸಿ, ಕರ್ನಾಟಕದ ಜೀವನದಿಗಳಾದ ಕಾವೇರಿ, ಹೇಮಾವತಿ, ನೇತ್ರಾವತಿ, ತುಂಗಾ, ಭದ್ರಾ, ಭೀಮ, ಕೃಷ್ಣಾ ಎಂದು ಹೆಸರಿಸಲಾಗಿದೆ. ಎರಡು ವಿಭಾಗಗಳೂ ಗ್ರಾಮೀಣ ಸೊಗಡಿನ ಹಸೆ ಚಿತ್ರಗಳಿಂದ ಮತ್ತು ಒಪ್ಪ ಓರಣಗಳಿಂದ ಕಂಗೊಳಿಸುತ್ತಿದೆ.

## ಮೆಟ್ರೋ ಬೆಂಗಳೂರು ಹಾತ್ ಲಕ್ಷಣಗಳು ಮತ್ತು ಚಟುವಟಿಕೆಗಳ ಪಕ್ಷಿನೋಟ.

1. ಹಳ್ಳಿಗಾಡಿನ ಜನರು, ಉತ್ಪಾದಕರು, ಕರಕುಶಲಗಾರರು, ವಿತರಕರು ತಮ್ಮ ತಮ್ಮ ವಸ್ತುಗಳನ್ನು ತಂದು ಮಾರಾಟ ಮಾಡುವಂತೆ ವ್ಯವಸ್ಥೆ ಮಾಡಲಾಗಿದೆ.
2. ಉತ್ಪಾದಕರನ್ನು, ವಿತರಕರನ್ನು ಹಾಗೂ ಮಾರಾಟಗಾರರನ್ನು ಅವರು ಮಾರಾಟ ಮಾಡುವ ಉತ್ಪಾದನೆಗೆ ಅನುಗುಣವಾಗಿ ವರ್ಗೀಕರಿಸಲಾಗಿದೆ.

3. ಉತ್ಪಾದಿತ ವಸ್ತುಗಳು ಹಾಗೂ ಬೇಡಿಕೆಗೆ ಅನುಗುಣವಾಗಿ ಮಾರಾಟ ಮಳಿಗೆಗಳನ್ನು ಕನಿಷ್ಠ 10 ದಿನ ಮತ್ತು ಗರಿಷ್ಠ 60 ದಿನಗಳಷ್ಟು ನಿಗದಿಪಡಿಸಲಾಗಿದೆ.
4. ಪ್ರತೀ ವ್ಯಾಪಾರಸ್ಥರೂ ತಮ್ಮ ಉತ್ಪಾದಿತ ವಸ್ತುಗಳನ್ನು ನ್ಯಾಯಯುತ ಬೆಲೆಯಲ್ಲಿ ವಾಣಿಜ್ಯ ಧರ್ಮಕ್ಕೆ ಅನುಗುಣವಾಗಿ ವ್ಯಾಪಾರ ಮಾಡಬೇಕಾಗುತ್ತದೆ.
5. ಆಡಳಿತಾತ್ಮಕ ಹಾಗೂ ನಿರ್ವಹಣೆಗಾಗಿ ವ್ಯಾಪಾರಸ್ಥರಿಂದ ವ್ಯಾಪಾರದ ಒಟ್ಟು ವಹಿವಾಟಿನಲ್ಲಿ ಶೇ.5ರಷ್ಟು ಕಮೀಷನ್(ಕರ) ಪಡೆಯಲಾಗುವುದು.
6. ಪ್ರತೀ ಮಳಿಗೆಗೆ ರೂ 100 ರಿಂದ 150ರಂತೆ ದಿನ ಬಾಡಿಗೆಯನ್ನು ಪಡೆಯಲಾಗುವುದು.

## ಬೆಂಗಳೂರು ಹಾತ್‌ನಲ್ಲಿ ಮಾರಲ್ಪಡುವ ವಸ್ತುಗಳು

ಬೆಂಗಳೂರು ಹಾತ್ ಹಳ್ಳಿಗಾಡಿನ ವಸ್ತುಗಳಿಗೆ ಆದ್ಯತೆಯನ್ನು ಒದಗಿಸಿದೆ. ಇಲ್ಲಿ ಕಲಾಗಾರರು ರಚಿಸಿರುವ ವಸ್ತುಗಳು, ಕುಶಲಕರ್ಮಿಗಳು ಉತ್ಪಾದಿಸುವ ವಸ್ತುಗಳು, ಖಾದಿ ವಸ್ತುಗಳು, ತೆಂಗಿನ ನಾರಿನ ವಸ್ತುಗಳು, ಲಾವಂಚ ವಸ್ತುಗಳು, ಚಿತ್ರಕಲಾ ಪ್ರಾಕಾರದ ವಸ್ತುಗಳು, ಪೊಟ್ಟಣಗಳ ಆಹಾರ ಪದಾರ್ಥಗಳು, ಇವುಗಳನ್ನೆಲ್ಲ ವರ್ಗೀಕರಿಸಿ ಒಂದೆಡೆ ದೊರಕುವಂತೆ ಮಾಡಲಾಗುವುದು. ವಸ್ತುಗಳನ್ನು ಜೋಡಿಸುವಾಗ ಒಂದು ಉಪ ವಿಭಾಗದಲ್ಲಿ ಒಂದೇ ತೆರನಾದ ವಸ್ತುಗಳು ದೊರೆಯುವಂತೆ ಕಾಳಜಿ ವಹಿಸಲಾಗಿದೆ.

## ಬೆಂಗಳೂರು ಹಾತ್‌ನ ಆಡಳಿತಾತ್ಮಕ ಕಟ್ಟಳೆಗಳು

ಈ ಸಂತೆಯಲ್ಲಿ ಭಾಗವಹಿಸುವ ಸ್ವ ಸಹಾಯ ಗುಂಪುಗಳಿಗೆ ನಮೂನೆ–1ನ್ನು ಭರ್ತಿಮಾಡಬೇಕಾಗಿದ್ದು ಅವರ ಎಲ್ಲಾ ಮಾಹಿತಿಯನ್ನು ಅದರಲ್ಲಿ ಕಲೆ ಹಾಕ ಬೇಕಾಗುತ್ತದೆ. ಸುಮಾರು 500 ಸ್ವ ಸಹಾಯ ಸಂಘಗಳು, ನೇರ ಉತ್ಪಾದಕರು ಹಾಗೂ ಕಲಾಗಾರರನ್ನು ಕರ್ನಾಟಕದಾದ್ಯಂತ ಹಾಗೂ ಕೆಲವು ಹೊರ ರಾಜ್ಯಗಳಿಂದ ಆಡಳಿತವು ಈಗಾಗಲೇ ಗುರುತಿಸಿದೆ. ಸ್ವ ಸಹಾಯ ಗುಂಪುಗಳನ್ನು ಗುರುತಿಸುವಲ್ಲಿ ಸರಕಾರದ ಗ್ರಾಮೀಣಾಭಿವೃದ್ಧಿ ಹಿರಿಯ ಅಧಿಕಾರಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಖಾದಿ ಮತ್ತು ಗ್ರಾಮೋದ್ಯೋಗ, ಮಹಿಳಾ ಕೈಗಾರಿಕೋದ್ಯಮಿಗಳ ಸಂಘ ಅತೀ ಹೆಚ್ಚಿನ ಪಾತ್ರವನ್ನು ನಿರ್ವಹಿಸಿರುತ್ತಾರೆ. ಈ ಸಂತೆಯಲ್ಲಿ ಭಾಗಿಯಾಗುವ ವ್ಯಕ್ತಿಗಳು ಮೆಟ್ರೋ ಸಂಸ್ಥೆಯಿಂದ ಅಂಗೀಕರಿಸಲ್ಪಟ್ಟ 21 ಕಟ್ಟುಪಾಡುಗಳಿರುವ ಕಟ್ಟಳೆಗಳಿಗೆ ತಾನು ಬದ್ಧನಾಗಿರುತ್ತೇನೆಂದು ಮುಚ್ಚಳಿಕೆಯನ್ನು ಬರೆದು ಕೊಡಬೇಕಾಗುತ್ತದೆ.

## ರಂಗಮಂಟಪ

ವರ್ಷದ ವಿಶೇಷ ದಿನಗಳಲ್ಲಿ ಗ್ರಾಮೀಣ ಸೊಗಡಿನ ಜಾನಪದ ಹಾಗೂ ಇತರೆ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವ ಸಲುವಾಗಿ ಬಯಲುರಂಗಮಂದಿರವೊಂದನ್ನು ನಿರ್ಮಿಸಲಾಗಿದ್ದು ಅದಕ್ಕೆ ರಂಗಮಂಟಪ ಎಂಬ ಹೆಸರನ್ನು ನೀಡಲಾಗಿದೆ. ಕರ್ನಾಟಕದ ಜಾನಪದ ಹಾಗೂ ಇತರೆ ಸಾಂಸ್ಕೃತಿಕ ಕಲಾಗಾರರ ಪಟ್ಟಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವಿನಿಂದ ತಯಾರಿಸಲಾಗಿದ್ದು ಪೂರ್ಣ ಪ್ರಮಾಣದಲ್ಲಿ ಗ್ರಾಮೀಣ ಯುವ ಪ್ರತಿಭೆಗಳನ್ನು ಗುರುತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈಗಾಗಲೇ ಸುಮಾರು 40ಕ್ಕೂ ಹೆಚ್ಚು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರಂಗಮಂಟಪವು ಸಾಕ್ಷಿಯಾಗಿದೆ. ಇದರಲ್ಲಿ ಶಾಲಾ ಕಾಲೇಜುಗಳು, ಖಾಸಗಿ ಸಂಘಸಂಸ್ಥೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಾಯೋಜಿಸಿರುವ ಸಾಂಸ್ಕೃತಿಕ ಕಾರ್ಯಕ್ರಮಗಳು ಒಳಗೊಂಡಿವೆ. ಬಿಎಂಆರ್‌ಸಿಎಲ್‌ನ ಮಹತ್ವಾಕಾಂಕ್ಷಿ ಯೋಜನೆ ಇದಾಗಿರುವುದರಿಂದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಸುಮಾರು 200 ಜನ ಪ್ರೇಕ್ಷಕರಿಗೆ ಅವಕಾಶವಿರುವ ಬಯಲು ರಂಗಮಂದಿರವಿದ್ದು ಕೇವಲ ರೂ. 500 ಬಾಡಿಗೆ ಹಾಗೂ ಉಳಿದಂತೆ ಸಂಘಸಂಸ್ಥೆಗಳಿಗೆ ರೂ 1,000 ನಿಗದಿಪಡಿಸಲಾಗಿದೆ. ಸಾರ್ವಜನಿಕರು ಇದರ ಸದುಪಯೋಗ ಪಡೆಯಬೇಕೆಂಬುದೇ ಸಂಸ್ಥೆಯ ಮಹದಾಶಯವಾಗಿದೆ.

## ಸುರಕ್ಷತೆ ಮತ್ತು ಶುಚಿತ್ವ

ಬೆಂಗಳೂರು ಹಾತ್‌ನ ಆವರಣದ ಸುರಕ್ಷತೆಗಾಗಿ ನಿರಂತರ ಭದ್ರತಾ ಸಿಬ್ಬಂದಿಗಳನ್ನು ಬಿಎಂಆರ್‌ಸಿಎಲ್ ಸಂಸ್ಥೆಯಿಂದ ನಿಯೋಜಿಸಲಾಗಿದೆ. ಮುಂದಿನ ದಿನಗಳಲ್ಲಿ ಸಿ ಸಿ ಕ್ಯಾಮರಾಗಳನ್ನು ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. ಬೆಂಗಳೂರು ಹಾತ್‌ನ ಆವರನದಲ್ಲಿ ಶುಚಿತ್ವಕ್ಕೆ ಅತೀ ಹೆಚ್ಚಿನ ಮಹತ್ವ ನೀಡಲಾಗಿದ್ದು ಸಾಕಷ್ಟು ಸಿಬ್ಬಂಧಿಗಳನ್ನು ಅದಕ್ಕಾಗಿ ನಿಯೋಜಿಸಲಾಗಿದೆ. ಶುಚಿತ್ವಕ್ಕಾಗಿ ಬರುವ ಪ್ರವಾಸಿಗರಿಗಲ್ಲದೆ ಭಾಗಿಗಳಾದ ವ್ಯಕ್ತಿಗಳಿಗೂ ಹಲವಾರು ಕಟ್ಟುಪಾಡುಗಳನ್ನು ಸೂಚಿಸಲಾಗಿದೆ.

## ಬೆಂಗಳೂರು ಹಾತ್‌ನ ಸಮಯ

ಬೆಂಗಳೂರು ಹಾತ್‌ನಲ್ಲಿ ಬೆಳಗ್ಗೆ 10.30ರಿಂದ ಸಾಯಂಕಾಲ 8.30ರ ತನಕ ವ್ಯಾಪಾರ ನಡೆಯಲು ಅವಕಾಶ ಕಲ್ಪಿಸಲಾಗಿದೆ.

## ಆಡಳಿತ

ಬೆಂಗಳೂರು ಹಾತ್‌ನ ಆಡಳಿತವು ಮೆಟ್ರೋ ಸಂಸ್ಥೆಯ ನಿರ್ದೇಶಕರುಗಳ ನಿರ್ದೇಶನದಂತೆ ಹಾಗೂ ವ್ಯವಸ್ಥಾಪಕ ನಿರ್ದೇಶಕರ ಆದೇಶದಂತೆ ಮುಖ್ಯ ಆಡಳಿತಾಧಿಕಾರಿಯವರ ನೇತೃತ್ವದಲ್ಲಿ ನಡೆಯುತ್ತಿದೆ. ಆಡಳಿತ ಕಛೇರಿಯು ಸ್ವಾಮಿ ವಿವೇಕಾನಂದ ಮೆಟ್ರೋ ರೈಲ್ವೇ ನಿಲ್ದಾಣದ ತಳಮಹಡಿಯಲ್ಲಿರುತ್ತದೆ ಹಾಗೂ ಪ್ರತಿನಿತ್ಯವೂ (ವಾರದ ಎಲ್ಲಾ ದಿನಗಳಲ್ಲಿ) ನಡೆಯುತ್ತಿದೆ. ಭಾಗವಹಿಸಲು ಇಚ್ಛಿಸುವವರು ನೇರವಾಗಿ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

# 2ನೇ ವರ್ಷದ ಬೆಂಗಳೂರು ಹಾತ್‌ನ ಸಾಂಸ್ಕೃತಿಕ ಸಪ್ತಾಹ:

ಬೆಂಗಳೂರು ಹಾತ್ ಮೇ 8ರ 2015ಕ್ಕೆ ತನ್ನ 3ನೇ ವರ್ಷದ ಹುಟ್ಟುಹಬ್ಬಕ್ಕೆ ಪಾದಾರ್ಪಣೆ ಮಾಡುತ್ತಿದೆ. ಈ ಸಂದರ್ಭದಲ್ಲಿ ಸಾಂಸ್ಕೃತಿಕ ಸಪ್ತಾಹ ಕಾರ್ಯಕ್ರಮವನ್ನು ಬಿಎಂಆರ್‌ಸಿಎಲ್‌ನ ಹಿರಿಯ ಅಧಿಕಾರಿಗಳ ಅಣತಿಯಂತೆ ಹಮ್ಮಿಕೊಳ್ಳಲಾಗಿದೆ. ಸದರಿ ಕಾರ್ಯಕ್ರಮಮ ದಿನಾಂಕ 03–05–2015ರಿಂದ 09–05–2015ರವರೆಗೆ (7 ದಿವಸ) ಸಮಯ ಸಾಯಂಕಾಲ 5ರಿಂದ ರಾತ್ರಿ 9ರವರೆಗೆ ನಡೆಯುತ್ತದೆ. ಸಾಂಸ್ಕೃತಿಕ ಕಾರ್ಯಕ್ರಮದ ವಿವರವನ್ನು ಲಗತ್ತಿಸಲಾಗಿದೆ. ಬೆಂಗಳೂರು ಹಾತ್‌ನಲ್ಲಿ ಪ್ರಸಿದ್ಧ ಕಲಾವಿದರುಗಳ 10 ತಂಡಗಳು ಭಾಗವಹಿಸುತ್ತಿದ್ದು, (ಶಾಸ್ತ್ರೀಯ ಸಂಗೀತ, ಜಾನಪದ ಕುಣಿತ, ಸುಗಮ ಸಂಗೀತ, ಭರತನಾಟ್ಯ, ಯಕ್ಷಗಾನ) ಕಾರ್ಯಕ್ರಮಗಳು ನಡೆಯಲಿದೆ.

ವಿಶೇಷ ಸೂಚನೆ: ಬೆಂಗಳೂರು ಹಾತ್‌ನ ವಿವರ ಮತ್ತು ಫೋಟೋವನ್ನು ಸಿಡಿಯಲ್ಲಿ ನೀಡಲಾಗುವುದು.

**ಹೆಚ್ಚಿನ ಮಾಹಿತಿಗಾಗಿ: ಡಾ.ಕೆ.ಪ್ರಭಾಕರ ರಾವ್, ಮುಖ್ಯ ಆಡಳಿತಾಧಿಕಾರಿಗಳು, ಬೆಂಗಳೂರು ಹಾತ್ ಮೊಬೈಲ್ ಸಂಖ್ಯೆ–9449874553**

**ಬಾಬು/ಕೆಎಂ**

**Information Special:**

# 2nd years Samskruthika Sapthaha BMRCL - Metro Bengaluru Haat (Metro Rural Haat)

Being considered as Silicon Valley of India Bangalore city has been experiencing several breakthrough in recent days. In conceptualising and

bringing the rural and urban folk together. Establishment of Bengaluru Haat by BMRCL is one of such attempts in recent days. It is created in the heart of the city i.e. in Byappanahalli, which will allow to display the richness of rural Karnataka Culture in particular and Indian culture in general on a permanent basis through the identification of rural artisans artists and the self help group. It has been aimed at to visualise a showpiece of traditional Karnataka/ Indian Culture- A Forum where Rural Life and Folk art are brought closure to urban clientele. Bengaluru Haat has completed 2 successful years on 8th may 2015.

**Objectives of the Project.**

Bengaluru Haat is created with the intention of fourfold objective. They are;

1. To set up a permanent marketing infrastructure for rural products and crafts.
2. To receive and revitalize traditional arts and crafts and prevent them from extinction.
3. To create awareness on the relevance and diversity of rural crafts and products.
4. To built consensus through citizen participation process, that will include the craftsmen, rural entrepreneurs, government agencies, Self help Groups, NGOs and general public that would help them to proactively work towards goal oriented objectives.

# The design and technical specification

Both divisions comprise cluster of 90 stalls and other open spaces where in SHGs are displaying their products. The Bengaluru Haat has been designed with traditional structures of both North Karnataka and South Karnataka style. The building structures of Bengaluru Haat comprises traditional Thotti mane, Katte mane, Mud House, Gumbaj structures and other styles of North Karnataka structures. While constructing such structures designer has designed such structures which would reflects the local Folk architecture and will make the location attractive for tourists. The entire land scape has been subdivided into 7 sub divisions and they are named after the prominent rivers of Karnataka-

Kaveri, Hemavathi, Tunga, Bhadra, Bhima and Krishna. Both sides of the structures are decorated with traditional Hase Art.

## The Concept of Bengaluru Haat

The Bengaluru Haat (village Market) has been created to conserve and faster the cultural heritage of the region. It has been conceived with the objective of providing a complete experience of the cultural heritage as reflected in its architecture, art and craft and cuisine. The Bengaluru haat will provide the ambience of traditional rural market, but one suited for more contemporary needs. A unique bazaar is planned in the heart of the city, which displays the richness of Karnataka culture on a permanent basis, enabling the rural poor to sell their products throughout the year. Needless to say that Bengaluru haat is not just a market place, it has been visualised as a showpiece of traditional Karnataka.

## Bangalore Haat management.

The management of Rural Haat is a separate unit within BMRCL. The management committee has been constituted for the management and maintenance of the Rural Haat which is comprising MD, BMRCL, Principal Secretary RD&PR, Director SEP, principal Secretary Women & child etc. The day to day management of Bengaluru haat is headed by a Chief Administrative Officer, who is on deputation (Present CAO is Dr K Prabhakar Rao). He has been assisted by 8 Executive Assistants and other supporting staffs. The responsibilities of CAO are implementing the management decision, collecting information on sale of products, functioning of these Haat and furnish the report to the Management.

## Income from Haat.

The Bengaluru haat is constituted on Self sustaining basis. For this purpose it is organised on a most reasonable commercial terms. It is under this background a minimum rental fee of Rs 100 and Rs 150 per stall per day has been proposed. A revenue share of 5% commission on the gross sales is also being collected. The area chosen for the Rural Haat is

both a commercial centre and tourist junction and therefore good products will have good market and ensures their profitability and hence the rental and revenue share will not affect either the marketability or the profitability of the rural people.

## Conditions for the participants.

There are 21 conditions have been forwarded by the management for the participants to be adhered by them. These conditions are approved by the Law section of the Management. The format of the condition and issues are as follows.

1. Santhe starts at 10.00am and ends at 9.00pm. Therefore you are expected to come to the premises every day one hour before the commencement, to arrange your stalls.
2. As there is no dormitory facility at present in the haat premises, arrangements have to be made by yourself for your stay at Bangalore.
3. Only two people per stall are allowed for sales.
4. Participants of Bengaluru haat have to bring their identity card issued by competent authorities (ZP Project Director/ Deputy Director woman and Child Department/ Deputy Director of SSI/ CEO of Khadi Gramodyog/ Authorities of Coir Board/ Authorities of Handicrafts/ Authorities of Woman Entrepreneurs/ Deputy Director of RDTDC etc.)
5. Every day the rent of the stall and commission at the rate of 5% on sales will be collected between 12pm to 7.00pm by the officials. You are required to adhere to this compulsorily.
6. The participant who would like to withdraw their sales before the stipulated date, are expected to inform at least 3 days before to the Chief Administrative Officer.
7. Participants have to bring themselves necessary portable equipments in order to showcase their goods. However they are requested to bring necessary light weight equipments (Bench, table, stands etc).
8. The participants are requested to come along with their goods at least two days earlier to Bengaluru haat to arrange their stalls.
9. Participants are not allowed to install any permanent materials in the premises.

10. Drawings pictures, paintings, writing on the wall and fixing nails to the walls are strictly prohibited.
11. During the business hour participants are expected to enter their movements in the movement register, wherein they are suppose to write the time and purpose of movement.
12. Every participant should keep the business place clean and tidy.
13. Participants are not allowed to make use of the goods and food items which will affect to the environment within the haat area.
14. Smoking, drinking and chewing of tobacco and other items are strictly prohibited.
15. Participants have to be polite with the customers. If any customer is creating disturbance it should be reported to the authorities immediately by the participants.
16. Participants have to maintain justified price and only good quality goods are to be sold. There is no scope for bargaining in the market.
17. The authorities of the haat will issue the bill books to the participants. In turn participants have to issue bills compulsorily for the sale of all items to the customers.
18. If the authorities have identified any Indiscipline, Misbehaviour and Misconduct noticed by the authorities, will be reported to the Managing Director of BMRCL who in turn may terminate such participants from sales at any time. The decision of Managing Director in relation with continuity of any participants is final.
19. Participants have to follow the rules and regulations enshrined in the letter and they have to agree to abide them in writing in Form No – 2, which is sent along with this letter.
20. Participants have to bring two passport size photos while they are coming.
21. Bengaluru haat authorities are not responsible for the goods brought and maintained by the participants during their stay.

All instructions and conditions mentioned above are to be followed compulsorily and any violation of this would be seriously viewed and it will be informed all the concerned authorities of the government.

## Selection procedure of the participants and time duration for the participants.

The management has issued form-1, which comprises the detailed information of the artisans, SHG's etc. These forms to be signed by competent authorities in order to ensure that they are the actual producers. Participants are invited for a minimum period of 10 days maximum of 60 days

## The Managing director - the Management head.

The Managing director of BMRCL is the Fountain Head of Bengaluru haat. It is according to his direction entire performance of Bengaluru santhe is to be preceded. CAO of Bengaluru haat is responsible and responsive to the MD.

### Ranga mantapa

In order to perform cultural programmes, beautiful one open air theatre is created in "A" block of Bengaluru Haat. Not less then 200 people can be accommodated in the open air theatre. So for more than 40 cultural programmes have been conducted by schools, private organisations and by the administration of BMRCL with the help of kannada and culture department. As per the direction of administration, in order to full fill the aspirations and desire of BMRCL, a lowest rental charge is being fixed for primary and high schools (Rs.500 per day) and Rs.1, 000 for others. The public at large in Bengaluru are requested to make use of this arrangement.

## Bengaluru Haat complete its successful 2nd year

It is really a happy occasion to note that, in spite of slow process of progress, Bengaluru Haat has completed its 2nd year of existence on 8th May 2015. Being an organisation of optimistic objectives of BMRCL, like last year, this year also bengaluru haat is intended to have its Samskruthika Sapthaha from 03-05-2015 to 09-05-2015 with the help of Kannada and Culture department. 10 prominent artists of different fields (Classical, folk, yakshagana artist, light music etc) are going to

participate in 7 days programmes. Cultural programmes will start every day by 6 P.M.

**For further details: Dr.K.Prabhakar Rao, Chief Administrative Officer, Bengaluru Haat , Contact No: 9449874553**

**babu/km**